


‘ಹಾಗಾದರೆ ನಾನೇನು ಮಾಡಲಿ?’ ಎಂದುಕೊಂಡು ಆ ಯುವಕ ತಾನು ಬರೆದ ಆ ಕಾಗದವನ್ನು ಪೆಟ್ಟಿಗೆಗೆ ಹಾಕಿ ಅತ್ತ ನಿಶ್ಚಿಂತನಾದನು.

ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮ ಅವರ ಕಡೆಯ ಜನ ನೀರಿಗಾಗಿ ಆಕಾಶದಿಂದ ಭೂಲೋಕಕ್ಕೆ ಜೇಡನ ಬಲೆಯ ಮೂಲಕ ಬರುತ್ತಿದ್ದರು. ಬಾವಿಯಲ್ಲಿದ್ದ ಕಪ್ಪೆ ಇದನ್ನು ನೋಡಿತ್ತು. ಒಂದು ದಿನ ಅದು ಆ ಯುವಕನ ಬಳಿಗೆ ಬಂದು ಮಾತನಾಡಿತು. ಆ ಕಪ್ಪೆಯು, ‘ಯುವಕನೇ’ ಎಂದು ಅವನನ್ನು ಮಾತನಾಡಿಸುತ್ತಾ, ‘ನಿನ್ನ ಕಾಗದವನ್ನು ನನ್ನ ಕೈಗೆ ಕೊಡು. ಅದನ್ನು ನಾನು ಆಕಾಶಕ್ಕೆ ತೆಗೆದುಕೊಂಡು ಹೋಗುತ್ತೇನೆ’ ಎಂದಿತು.

ಆಗ ಆ ಯುವಕ, ‘ನೀನು! ಕೆಲವರು ರೆಕ್ಕೆಗಳನ್ನು ಹೊಂದಿರುತ್ತಾರೆ. ಅದು ಅವರ ಜೀವನಕ್ರಮವಾಗಿರುತ್ತದೆ. ಆದರೆ ನೀನು ಕಪ್ಪೆ, ನಿನ್ನ ಹೆಸರು ಮೈನು! ನೀನು ಕಾಗದವನ್ನು ಕೊಡು ಅಂತಿದ್ದೀ. ‘ನಾನು ಅಲ್ಲಿಗೆ ಹೋಗ್ತೀನಿ’ ಅಂತ ಹೇಗೆ ಹೇಳ್ತೀಯಾ?